# ಗರ್ದಿ-ಗಮ್ಮತ್ತಿನ ಕೊನೆಯ ಕುಡಿ- ತಿಮ್ಮಣ್ಣ ರಾಮವಾಡಗಿ

ಎಂ.ಡಿ.ಚಿತ್ತರಗಿ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುದಗಲ್, ರಾಯಚೂರು.

DOI: https://doi.org/10.5281/zenodo.17486897

## ABSTRACT:

ಪ್ರಸ್ತುತ ಲೇಖನವು ಕೋಟೆನಾಡಿನ ಅಪರೂಪದ ಜನಪದ ಕಲಾವಿದ ತಿಮ್ಮಣ್ಣ ರಾಮವಾಡಗಿ ಅವರ ಬದುಕು ಮತ್ತು ಗರ್ದಿಗಮ್ಮತ್ತು (ವಡ್ಡರ ನಾಗವ್ವ/ ಬಾಂಬೆ ಡಬ್ಬಾ ಟಾಕೀಸ್) ಎಂಬ ವಿಶಿಷ್ಟ ಕಲಾ ಪ್ರಕಾರದ ಬಗ್ಗೆ ಪಕ್ಷಿನೋಟ ಬೀರುತ್ತದೆ. ಇಳಕಲ್ ಮೂಲದ ಅನಕ್ಷರಸ್ಥರಾದ ಎಂಬತ್ತೈದರ ಇಳಿವಯಸ್ಸಿನ ತಿಮ್ಮಣ್ಣನವರು ಐದಾರು ದಶಕಗಳಿಂದ ಗರ್ದಿಗಮ್ಮತ್ತನ್ನೇ ತಮ್ಮ ಬದುಕಾಗಿಸಿಕೊಂಡು ಹಳ್ಳಿ-ಪಟ್ಟಣಗಳಲ್ಲಿ ಅದನ್ನು ಜೀವಂತವಾಗಿಟ್ಟಿದ್ದಾರೆ. ಈ ಸಂಚಾರಿ ಮಾಯಾಪೆಟ್ಟಿಗೆಯು ಐತಿಹಾಸಿಕ, ಧಾರ್ಮಿಕ ಮತ್ತು ಸಾಮಾಜಿಕ ಸಂಗತಿಗಳನ್ನು ಹಾಡು-ತಾಳಗಳೊಂದಿಗೆ ಪ್ರದರ್ಶಿಸುವ ಮೂಲಕ ಮನರಂಜನೆ ಹಾಗೂ ಶಿಕ್ಷಣ ನೀಡುತ್ತಾ ಬಂದಿದೆ. ಆಧುನಿಕ ಯುಗದ ಸವಾಲುಗಳ ನಡುವೆಯೂ ಕಲೆ ಮತ್ತು ಜೀವನೋಪಾಯಕ್ಕಾಗಿ ಹೆಣಗುತ್ತಿರುವ, ಈ ಪರಂಪರೆಯ ಕೊನೆಯ ಕೊಂಡಿಯಂತಿರುವ ತಿಮ್ಮಣ್ಣನವರಿಗೆ ಸೂಕ್ತ ಪ್ರೋತ್ಸಾಹ ಮತ್ತು ಬೆಂಬಲದ ಅಗತ್ಯವನ್ನು ಲೇಖನ ಒತ್ತಿ ಹೇಳುತ್ತದೆ.

## KEYWORDS:

ಗರ್ದಿಗಮ್ಮತ್ತು, ತಿಮ್ಮಣ್ಣ ರಾಮವಾಡಗಿ, ಜನಪದ ಕಲೆ, ವಡ್ಡರ ನಾಗವ್ವ, ಇಳಕಲ್.

ಜನಪದ ಸಾಹಿತ್ಯದ ಗರ್ಭದಲ್ಲಿ ಅದೆಷ್ಟೋ ಹೂವುಗಳು ಅರಳರಳಿ ಜಗದ ಅಂಗಳದ ತುಂಬ ಪರಿಮಳವನ್ನು ಬಿತ್ತಿ ಬೆಳೆದಿವೆ. ನಮ್ಮ ಪೂರ್ವಿಕರ ಬದುಕಿನ ಜೀವಸೆಲೆಯಿಂದ ಹುಟ್ಟಿದ ಹಾಡು-ಪಾಡು, ಕಥೆ-ಕವನ, ಕಲೆ-ಸಾಹಿತ್ಯ, ಬದುಕು-ಬವಣೆಗಳೆಲ್ಲ ಅಲ್ಲಲ್ಲಿ ಚಿಗಿತು, ಮೊಳೆತು ಗರಿ ಬಿಚ್ಚಿ ಹಾಡಿವೆ; ಕುಣಿದಿವೆ; ನಲಿದು ನಲಿಸಿವೆ. ನಾಡ ಸಂಸ್ಕೃತಿಯ ಬಿಂಬ ಪ್ರತಿಬಿಂಬವನ್ನು ತಮ್ಮೊಡಲಲ್ಲಿಟ್ಟು ಸಂಭ್ರಮಿಸಿವೆ. ಇವುಗಳ ಹಿಂದೆ ಅಜ್ಞಾತ ಕವಿಗಳ, ಅನುಭವದ ಗಣಿಗಳ, ಅನಕ್ಷರಸ್ಥ ಮಣಿಗಳ ಮುತ್ತು ಮಾಲೆಗಳಿವೆ; ಬೆವರ ಕಂಪಿದೆ; ನೋವು-ನಲಿವಿದೆ; ಜಗದ ನೆರಳೂ, ಬೆಳಕೂ ಹಾಸಿ ಹೊದ್ದುಕೊಂಡಿದೆ. ಕಲಾಪ್ರಪಂಚದ ನೂರಾರು-ಸಾವಿರಾರು ಕಥಾನಕಗಳ ಹಿಂದೆ ಹಸಿವಿನ ಇತಿಹಾಸವಿದೆ; ಬದುಕುವ ಛಲಕೆ ಉತ್ಸಾಹದ ಹಂಬಲ-ಬೆಂಬಲಗಳ

ಒತ್ತಾಸೆಯಿದೆ. ಕನ್ನಡದ ಮಿತಿಯನ್ನು ಮೀರಿ ಸಮಸ್ತ ಭಾರತದ ಗಲ್ಲಿ–ಗಲ್ಲಿಗಳಲ್ಲಿ ಸಹಸ್ರ–ಸಹಸ್ರ ಕಲಾ ಬದುಕಿನ ನೆರಳೂ ಬೆಳಕೂ ಮುಂಚಾಚಿಕೊಂಡು, ಕೆಲವು ಅರಳುತ್ತ, ಇನ್ನೆಲವು ನರಳುತ್ತ ಹೆಜ್ಜೆ ಹಾಕುತ್ತಿವೆ.

ಕಲಾ ಜಗತ್ತಿನ ಹಜಾರದಲ್ಲಿ ಕೋಟೆನಾಡಿನ ಕಣಕಣದಲ್ಲೂ ಜನಪದದ ಉಸಿರಿದೆ. ಹಸಿರೂ, ಹೆಸರು ದಟ್ಟವಾಗಿ ಹರವಿಕೊಂಡು ಜಾನಪದ ಲೋಕವನ್ನು ಶ್ರೀಮಂತಗೊಳಿಸಿವೆ. ಅದರ ಒಂದು ಭಾಗವೇ 'ಗರ್ದಿಗಮ್ಮತ್ತು' ಎಂಬ ವಿಶಿಷ್ಟ ಕಲೆಯೂ! ತಿಮ್ಮಣ್ಣ ರಾಮವಾಡಗಿ ಎಂಬ ಕಲಾಪ್ರತಿಭೆಯೂ....! ಕಳೆದ ಐದಾರು ದಶಕಗಳಿಂದ ಗರ್ದಿಗಮ್ಮತ್ತನ್ನೇ ಬದುಕಿನ ಭಾಗವನ್ನಾಗಿಸಿಕೊಂಡು, ಇಳಿಸಂಜೆಯಲ್ಲೂ ಅದನ್ನೇ ಉಸಿರಾಡುತ್ತಾ, ಹಂಚಿ ಹಗುರಾಗುತ್ತಾ ಜೀವಿಸುತ್ತಿರುವ ಜನಪದ ಜಗತ್ತಿನ ಅಪರೂಪದ ಕಲಾವಿದನ ಬದುಕಿನೆಡೆಗೊಂದು ಪಕ್ಷಿನೋಟ.

ಕೋಟೆನಾಡಿನ ಸೀರೆ ಖ್ಯಾತಿಯ ಇಳಕಲ್ಲಿನ ಮಣ್ಣೊಳಗೆ ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಅಡವಿ ಗೊಲ್ಲರ ಜನಾಂಗದಲ್ಲಿ ಗುರಪ್ಪ–ಯಲ್ಲವ್ವ ದಂಪತಿಗಳ ಉದರದಲ್ಲಿ ಜನಿಸಿದ ತಿಮ್ಮಣ್ಣ ಬಡತನವನ್ನು ಉಂಡುಟ್ಟರೂ ಜಗದ ನಗುವಿಗೆ ಬೆಳಕಿನ ಕಡ್ಡಿ ಗೀರಿದವರು. ಸರಕಾರದ ಜನತಾ ಮನೆಯ ಸೂರಿನಲ್ಲಿ ಮೊಮ್ಮಕ್ಕಳ ಸಹಾಯ ಸಹಕಾರದೊಂದಿಗೆ ಶಿಥಿಲವಾಗಿರುವ ಬದುಕನ್ನು ಕುಂಟುತ್ತ ದೂಡುತ್ತಿರುವ ಇವರು ಎಂಬತ್ತೈದರ ಸಂಧ್ಯಾಕಾಲದಲ್ಲೂ ಗರ್ದಿಗಮ್ಮತ್ತಿನ ಘಮಲನ್ನು ಸುತ್ತಲ ಹತ್ತೂರಿಗೆ ಹಂಚುತ್ತಲೇ ಇರುವ ಅಪ್ಪಟ ಕಲಾವಿದ. ಅಖಂಡ ಬದುಕನ್ನು ಬ್ರಹ್ಮಚಾರಿಯಾಗಿಯೆ ಕಳೆದಿರುವ ಇವರು ಅನಕ್ಷರಸ್ಥರೆಂಬುದು ಸೋಜಿಗದ ಸಂಗತಿ. ಟಿ.ವಿ, ಕಂಪ್ಯೂಟರ್, ಮೊಬೈಲ್ ಜಗತ್ತಿನಲ್ಲಿ ಓಡುತ್ತಿರುವ ಧಾವಂತದ ಈ ದಿನಗಳಲ್ಲೂ ತಿಮ್ಮಣ್ಣನವರ ತುತ್ತಿನ ಚೀಲಕ್ಕೆ, ಮಾಗಿದ ಸಂಜೆಯ ಬದುಕಿನ ಬವಣೆಗೆ, ಬಣ್ಣಕ್ಕೆ ನೆರಳಾಗಿ ಸಾಗುತ್ತಿರುವುದು ಗರ್ದಿಗಮ್ಮತ್ತು ಎಂಬ ಆ ಕಾಲದ ಕಲೆ ಎನ್ನುವ ಸಂಗತಿ ಬಲು ವಿಸ್ಮಯಕಾರಿ.

ಎಪ್ಪತ್ತು–ಎಂಭತ್ತರ ದಶಕದ ಮಕ್ಕಳ ಮನರಂಜನೆಯ ಆಕರ್ಷಣೆಯಾಗಿದ್ದ ಗರ್ದಿಗಮ್ಮತ್ತು ಎಂಬ ವಿಸ್ಮಯದ ಪೆಟ್ಟಿಗೆ ಬಾಲಕ ತಿಮ್ಮಣ್ಣನನ್ನು ಬಲು ಬೇಗ ಆಕರ್ಷಿಸಿತ್ತು. ತಾಯಿಯ ತವರುಮನೆಯಾಗಿದ್ದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ 'ಹಿರೇವಂಕಲಕುಂಟ'ದಲ್ಲಿ ಜನಜನಿತವಾಗಿದ್ದ ಭೀಮಣ್ಣನೆಂಬ ಕಲಾವಿದನ ಮಾಯಾಪೆಟ್ಟಿಗೆಯ ಹಿಂದೆ ಓಡಾಡಿಕೊಂಡಿದ್ದ. ಪಟ್ಟುಬಿಡದಂತೆ ಅಂಟಿಕೊಂಡ ತಿಮ್ಮಣ್ಣ ಬಲುಬೇಗ ಕಲೆಯನ್ನು ಕರಗತ ಮಾಡಿಕೊಂಡಿದ್ದಲ್ಲದೆ ಹದಿನೇಳು–ಹದಿನೆಂಟನೆಯ ವಯಸ್ಸಿಗೆ ಗರ್ದಿಗಮ್ಮತ್ತಿನ ಚುಕ್ಕಾಣಿ ಹಿಡಿದಿದ್ದ. ಅಂದು ಹೊತ್ತುಕೊಂಡ ಪೆಟ್ಟಿಗೆಯನ್ನು ಇನ್ನೂ ಇಳಿಸದೆ ಏದುಸಿರುಬಿಡುತ್ತಾ ಹೊತ್ತು ಮುನ್ನಡೆಯುತ್ತಿರುವುದು ಆತನ ಕಲಾವೈಭವಕ್ಕೆ, ಜಾನಪದ ಜಿಗುಟುತನಕ್ಕೆ ಸಾಕ್ಷಿ

ಮಾತ್ರವಲ್ಲದೆ ಅನಿವಾರ್ಯತೆಯ, ಸಂಕಟದ ಬದುಕಿನೋಟಕ್ಕೂ ಕನ್ನಡಿಯಾಗಿ ಕಾಣಿಸುತ್ತದೆ. ಜೊತೆಗೆ ಈ ಹಿರಿಯ ಜೀವದ ಬದುಕನ್ನು ಹತ್ತಿರದಿಂದ ನೋಡುವವರ ಕಣ್ಣುಗಳನ್ನು ತೇವವಾಗಿಸದೆ ಬಿಡದು.

**ಗರ್ದಿಗಮ್ಮತ್ತು ಎಂಬ ಮಾಯಾಪೆಟ್ಟಿಗೆ:**

ಜನಮಾಸದಲ್ಲಿ 'ವಡ್ಡರ ನಾಗವ್ವ' ಎಂದೂ, 'ಬಾಂಬೆ ಡಬ್ಬಾ ಟಾಕೀಸ್' ಎಂದೂ ಚಿರಪರಿಚಿತವಾಗಿರುವ ಗರ್ದಿಗಮ್ಮತ್ತು ಎಂಬ ಕಲಾ ಪ್ರಕಾರವು ವಿಶಿಷ್ಠವಾದುದು. ದೊಡ್ಡ ಹಳೆಯ ರೇಡಿಯೋದಂತಿರುವ ಸಂಪೂರ್ಣ ಮುಚ್ಚಿರುವ ಕಟ್ಟಿಗೆಯ ಪೆಟ್ಟಿಗೆಯಿದು. ಪೆಟ್ಟಿಗೆಯ ಮುಂಭಾಗದಲ್ಲಿ ವೀಕ್ಷಿಸಲು ಅನುಕೂಲವಾಗಿರುವಂತೆ ಮುಚ್ಚಳಸಹಿತವಾಗಿರುವ ನಾಲ್ಕು ಕಿಂಡಿಗಳು. ಒಳಗಿರುವ ಚಿತ್ರಗಳು ಸ್ಪಷ್ಟವಾಗಿ ಹಾಗೂ ದೊಡ್ಡದಾಗಿ ಕಾಣಿಸಲು ಪೀನಮಸೂರವನ್ನು ಅಳವಡಿಸಲಾಗಿದ್ದು ಹಗಲಿನಲ್ಲಿ ಸರಾಗವಾಗಿ ನೋಡಬಹುದಾಗಿದೆ. ರಾತ್ರಿಯ ಸಮಯದಲ್ಲಿ ಸೀಮೆಎಣ್ಣೆಯ ದೀಪವನ್ನಿಟ್ಟು ಪ್ರದರ್ಶಿಸಲಾಗುತ್ತಿದ್ದು, ಇತ್ತೀಚೆಗೆ ಅದರ ಸ್ಥಾನವನ್ನು ಟಾರ್ಚ್ ದೀಪ ಅಲಂಕರಿಸಿದೆ. ಒಳಭಾಗದಲ್ಲಿ ಪೆಟ್ಟಿಗೆಯ ಮೇಲ್ಗಡೆ ವೈವಿಧ್ಯಮಯ ಚಿತ್ರಗಳನ್ನು ಅಳವಡಿಸಲಾಗಿದ್ದು ಮೇಲಿರುವ ಕೀಲಿನಂತಹ ಕೊಂಡಿಯನ್ನು ತಿರುಗಿಸಿದಂತೆ ಶಬ್ಧರಹಿತ ಚಲಿಸುವ ಸ್ಥಿರಚಿತ್ರಗಳು ಬಯೋಸ್ಕೋಪಿನಲ್ಲಿ ತೋರಿಸುವಂತೆ ಚಲಿಸುತ್ತಿದ್ದರೆ ಅದಕ್ಕೆ ಸರಿಯಾಗಿ ಹೊಂದಿಕೆಯಾಗುವಂತೆ ಕಲಾವಿದ ಚಿತ್ರವಿವರವನ್ನು ಹಾಡಿನ ರೂಪದಲ್ಲಿ ಬಿತ್ತರಿಸುತ್ತಾನೆ. ಜೊತೆಜೊತೆಗೆ ಕಲಾವಿದನ ಎಡಗೈಯಲ್ಲಿರುವ ಗೆಜ್ಜೆಯ ಸದ್ದು, ಬಲಗೈಯಿಂದ ಬಾರಿಸುವ ತಾಳಸಹಿತವಾದ ಸದ್ದು ಹಾಗೂ ಕಲಾವಿದನ ತಲೆಗಿರುವ ಬಣ್ಣಬಣ್ಣದ ಟೊಪ್ಪಿಗೆ ಮತ್ತು ಅದಕ್ಕೆ ಬಂಧಿಸಿರುವ ಚಂಡಿನಾಕಾರದ ವಸ್ತುಗಳು ಏಕಕಾಲಕ್ಕೆ ಸಾಗುವ ಸಮಯದ ಹೊಂದಾಣಿಕೆ ಇಡೀ ಆಟಕ್ಕೆ ಘಮಲನ್ನು ತಂದುಕೊಡುತ್ತದೆ. ಇಡೀ ಪೆಟ್ಟಿಗೆಯನ್ನಿಡಲು ಕಟ್ಟಿಗೆಯ ಸ್ಟ್ಯಾಂಡನ್ನು ಬಳಸಲಾಗುತ್ತಿದ್ದು ಇದು ಊರಿಂದೂರಿಗೆ ಇಡಿಯಾಗಿ ಹೊತ್ತುಕೊಂಡೇ ಹೋಗುವ ಸಾಧನವಾಗಿದ್ದು, ಇದೊಂದು ಸಂಚಾರಿ ಥಿಯೇಟರನಂತಿದೆ.

ಈ ವಡ್ಡರ ನಾಗವ್ವ ಹಳ್ಳಿಯಿಂದ ಹಿಡಿದು ದಿಲ್ಲಿಯವರೆಗಿನ ಸಕಲವನ್ನು, ದೇಶದಾಚೆಗಿನ ವಿಶಿಷ್ಠತೆಯನ್ನು ತನ್ನ ಹೊಟ್ಟೆಯಲ್ಲಿ ತುಂಬಿಕೊಂಡೇ ಊರೂರಿನ ಗಲ್ಲಿಗಲ್ಲಿಗಳಲ್ಲಿ ಗರಿಗರಿಯಾದ ನಗುವನ್ನು ಚೆಲ್ಲುತ್ತ ಸುತ್ತುತ್ತಾಳೆ. ಸಿನೆಮಾ ಕ್ಷೇತ್ರದ ದೇವಾನಂದ, ಅಮಿತಾಬ್ ಬಚ್ಚನರಿಂದ ಹಿಡಿದು ಭಾಷೆ ಮತ್ತು ಪ್ರಾದೇಶಿಕತೆಯ ಗಡಿಯನ್ನು ಮೀರಿದ ನಟ–ನಟಿಯರನ್ನು, ಖಳನಾಯಕರನ್ನು, ಕಾರ್ಟೂನ್ ಹೀರೋಗಳನ್ನು, ದೇಶದ ಮೊದಲ ಪ್ರಧಾನಿ ಜವಹರಲಾಲ್ ನೆಹರೂ, ಇಂದಿರಾರವರಿಂದ ಇವತ್ತಿನ ಮುಖ್ಯ ರಾಜಕಾರಣಿಗಳನ್ನು, ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನಿಂದ ತಾಜಮಹಲ್, ಇಂಡಿಯಾ ಗೇಟ್‌ವರೆಗಿನ ಮುಖ್ಯ ಸ್ಥಳನಾಮಗಳನ್ನು

ತುಂಬಿಕೊಂಡಿರುತ್ತಾಳೆ. ಅಲ್ಲದೆ ಸಚಿನ್ ತೆಂಡೂಲ್ಕರ ಆದಿಯಾಗಿ ಸಕಲ ಕ್ರೀಡಾಪಟುಗಳು, ಸ್ವಾತಂತ್ರ್ಯ ಹೋರಾಟಗಾರರು, ಮಹಾನ್ ಸ್ಮಾರಕಗಳು, ರಾಮಾಯಣ–ಮಹಾಭಾರತದ ಪಾತ್ರ–ಚಿತ್ರಣಗಳು, ಧಾರ್ಮಿಕ ಕ್ಷೇತ್ರಗಳು, ಜಾತ್ರೆಗಳು, ನದಿ–ಜಲಪಾತ–ಹಳ್ಳ–ಕೊಳ್ಳ–ಆಣೆಕಟ್ಟುಗಳನ್ನು ಮಾತ್ರವಲ್ಲದೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾದ ಸಂಗತಿಗಳನ್ನು, ನ್ಯಾಯ ವಿಧಾನದ ಸೂತ್ರಗಳನ್ನು, ಎಚ್ಚರಿಕೆಗಳನ್ನು ಬಿತ್ತರಿಸುವ ಮಹಾಮಾಧ್ಯಮದ ವಾರಸುದಾರಳಂತೆ ಕಾಣಿಸುತ್ತಾಳೆ. ಮೆಕ್ಕಾ–ಮದೀನಾಗಳನ್ನು ಸುತ್ತಿ, ಪಾಕಿಸ್ತಾನ–ಅರಬಸ್ತಾನ್‌ಗಳನ್ನು ನೋಡಿ, ಅರಬಸ್ಥಾನದ ಕುದುರೆಗಳನ್ನೇರಿ ಓಡಾಡುತ್ತಾಳೆ. ಇದರ ಜೊತೆಜೊತೆಗೆ ಸ್ಥಳೀಯ ಸಂಗತಿಗಳು ಹಾಗೂ ಸನ್ನಿವೇಶಗಳೊಂದಿಗೆ ಹಾಸ್ಯಮಿಶ್ರಿತವಾಗಿ ಜೊತೆಗೂಡಿ ನಗೆಯ ಕಡಲನ್ನು ಹರಿಬಿಡುತ್ತಾಳೆ. ಕೇವಲ ಮನರಂಜನೆಯ ಉದ್ದೇಶ ಮಾತ್ರವಲ್ಲದೆ ಲೋಕದ ಸಕಲ ಸಂಗತಿಗಳನ್ನು ಒಂದೇ ಏಟಿಗೆ, ಮೂರು–ನಾಲ್ಕು ನಿಮಿಷಕ್ಕೆ ಬಿತ್ತರಿಸುವ ಮಹಾರಾಯಭಾರಿ ಈ 'ವಡ್ಡರ ನಾಗವ್ವ'ಳೆಂದರೆ ತಪ್ಪಾಗಲಿಕ್ಕಿಲ್ಲ.

**ಗರ್ದಿಗಮ್ಮತ್ತಿನ ಅಜೀವ ರಾಯಭಾರಿ ತಿಮ್ಮಣ್ಣ ರಾಮವಾಡಗಿ:**

ಜಗತ್ತಿನ ಅಂತರಂಗವನ್ನೇ ತನ್ನೊಡಲಲ್ಲಿ ತುಂಬಿಕೊಂಡಿದ್ದ ಈ ಮಾಯಾಪೆಟ್ಟಿಗೆಯನ್ನು ಅಂದು ನೂರಾ ಮೂವತ್ತು ರೂಪಾಯಿಗೆ ಕೊಂಡುಕೊಂಡ ಚಿಗುರುಮೀಸೆಯ ಹುಡುಗ ಅದನ್ನು ಹೊತ್ತುಕೊಂಡು ಬರಿಗಾಲಲ್ಲಿ ಅಲೆಯುತ್ತ ಜಾತ್ರೆ, ಉರುಸ್–ಉತ್ಸವಗಳು ಮಾತ್ರವಲ್ಲದೆ, ಸಂತೆ–ಪೇಟೆಗಳನ್ನೆಲ್ಲ ದಣಿವಿಲ್ಲದೆ ತಿರುಗಿದ. ಅನಕ್ಷರಸ್ಥನಾಗಿದ್ದರೂ ಪ್ರಮುಖ ವ್ಯಕ್ತಿ, ವಸ್ತು, ಸ್ಥಳ, ಸಂಗತಿಗಳ ಚಿತ್ರಗಳನ್ನು ಆಯ್ಕೆ ಮಾಡಿ ಅಚ್ಚುಕಟ್ಟಾಗಿ ಜೋಡಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದ. ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ತಾನು ಮೂಲದಲ್ಲಿ ಹಿರೇವಂಕಲಕುಂಟಾದ ಭೀಮಣ್ಣನಿಂದ ಕಲಿತಿದ್ದ ಹಾಡಿನ ದಾಟಿಯಂತೆ ರಚಿಸಿಕೊಳ್ಳುತ್ತಿದ್ದ; ಅಷ್ಟೇ ಅಲ್ಲದೆ ಸಮಸ್ತ ಹಾಡನ್ನು ನೆನಪಿಟ್ಟುಕೊಂಡು ರಾಗ–ತಾಳ–ಹಾವಭಾವ ಮತ್ತು ಸಮಯದ ಹೊಂದಾಣಿಕೆಯೊಂದಿಗೆ ನುಡಿಸುವ ಪರಿ ನಿಜವಾಗಿಯೂ ಮೆಚ್ಚುವಂಥದ್ದು. ಮೊಹರಂ ಹಬ್ಬದಲ್ಲಿ ಮೊದಲ ಪ್ರಯೋಗ ಮಾಡಿದ ಈತ ಕೇವಲ ಐದು ಪೈಸೆಗೆ, ಒಂದು ರೊಟ್ಟಿಗೆ, ಒಂದಿಷ್ಟು ಕೂದಲಿಗೆ ಚಿತ್ರ ಪ್ರದರ್ಶಿಸಿ ತುತ್ತಿನ ಚೀಲ ತುಂಬಿಸಿಕೊಳ್ಳುವುದಕ್ಕಷ್ಟೇ ಸಫಲನಾಗಿದ್ದ. ತದನಂತರದಲ್ಲಿ ಕಾಲ ಬದಲಾದಂತೆ ನಾಕಾಣೆ, ಎಂಟಾಣೆ, ಒಂದು–ಎರಡು ರೂಪಾಯಿ ತಲುಪಿ, ಐದು ರೂಪಾಯಿ ದಾಟಿ ಇಂದು ಹತ್ತು ರೂಪಾಯಿಗೆ ಬಂದು ನಿಂತಿದೆ.

ಮನೆದೇವರ, ಹಿರಿಯರ ಆಶೀರ್ವಾದದ ಫಲವೆಂದೇ ಭಾವಿಸಿಕೊಂಡು ಬದುಕಿನ ಬಂಡಿ ನೂಕುತ್ತಿರುವ ತಿಮ್ಮಣ್ಣನಲ್ಲಿ ಇದರ ಬಗೆಗೆ ಯಾವ ವ್ಯಥೆಯೂ ಕಾಣದು. ಈ ಪೆಟ್ಟಿಗೆಯನ್ನು 'ಸಾಕ್ಷಾತ್ ಲಕ್ಷ್ಮೀ' ಎಂದೇ ಕೈಮುಗಿಯುತ್ತಾ

ಭಾವಪರವಶರಾಗಿ ಕಣ್ತುಂಬಿಕೊಳ್ಳುತ್ತಾರೆ. ತುಂಬು ಯೌವ್ವನದಲ್ಲಿ ಮರದ ಮೇಲಿಂದ ಬಿದ್ದು ನಡ ಮುರಿದುಕೊಂಡ ಕಾರಣ ಮದುವೆಯನ್ನೇ ಧಿಕ್ಕರಿಸಿ ಬ್ರಹ್ಮಚಾರಿಯಾಗಿಯೆ ಬದುಕು ಸವೆಸಿದವರು. ಗರ್ದಿಗಮ್ಮತ್ತಿನ ಪೆಟ್ಟಿಗೆಯೇ ಜೀವನದ ಸರ್ವಸ್ವವಾಗಿದ್ದು ಐದಾರು ದಶಕಗಳಲ್ಲಿ ಮೊದಲಿನ ಎರಡು ಪೆಟ್ಟಿಗೆಗಳು ಸವೆದು ಅವಶೇಷವಾಗಿದ್ದು ಈಗ ಮೂರನೇಯ ಪೆಟ್ಟಿಗೆಯೊಂದಿಗೆ ಈ ಅಪರೂಪದ ಕಲೆಯನ್ನು ಜೀವಂತವಾಗಿಟ್ಟಿದ್ದಾರೆ. ಆಧುನಿಕ ಬದುಕಿನ ಹೊಸ ಗೆಳೆಯರಾದ ಬಿ.ಪಿ ಹಾಗೂ ಶುಗರ್ ದೇಹವನ್ನೊಕ್ಕು ಬಾಧಿಸುತ್ತಿದ್ದರೂ, ವೈದ್ಯರ ಮಾತನ್ನು ನಿರ್ಲಕ್ಷಿಸಿ ಈ ಕಲೆಯನ್ನು ಮುಂದುವರಿಸುತ್ತಿರುವುದು ಹೆಮ್ಮೆ-ಅಭಿಮಾನದ ಸಂಗತಿಯೂ ಹೌದು; ಅನಿವಾರ್ಯದ ಸಂಕಟವೂ ಹೌದು.

ಬದುಕಿನ ಸರ್ವಸ್ವವನ್ನಾಗಿಸಿಕೊಂಡಿದ್ದ ಈ ಗರ್ದಿಗಮ್ಮತ್ತಿನ ಮಾಯಾಪೆಟ್ಟಿಗೆಯನ್ನು ಒಮ್ಮೆಯಂತೂ ಅನಾರೋಗ್ಯದ ನಿಮಿತ್ತ ಮೂಲೆಯಲ್ಲಿಟ್ಟು ತಿಂಗಳು-ವರ್ಷಗಟ್ಟಲೇ ಕೈಕಟ್ಟಿಕೊಂಡು ಕುಳಿತುಬಿಟ್ಟಿದ್ದ. ಈ ಹಂತದಲ್ಲಿ ಇವರ ಮನೆಗೆ ಭೇಟಿ ಕೊಟ್ಟು, ಪ್ರೋತ್ಸಾಹದ ಬೆಂಬಲವನ್ನಿತ್ತು ಮತ್ತೆ ಆಟವನ್ನು ಮುಂದುವರಿಸಲು ಬೆನ್ನುತಟ್ಟಿದ ಚಿತ್ರಕಲಾ ಶಿಕ್ಷಕರಾಗಿದ್ದ ದಿ: ಕಾಶೀಂ ಕನಸಾವಿಯವರನ್ನು ಬಾಯ್ತುಂಬ ನೆನೆಯುತ್ತಾರೆ. ಜೊತೆಗೆ ಅವರ ಕಲಾಪರಂಪರೆಯ ಪ್ರದರ್ಶನಕ್ಕೆ ಅವಕಾಶ ಮಾಡಿಕೊಟ್ಟ ಚಿಕ್ಕಮಂಗಳೂರು ಹಾಗೂ ಹೂವಿನಹಡಗಲಿಯ ಕಾರ್ಯಕ್ರಮದ ಆಯೋಜಕರನ್ನು ತುಂಬು ಮನಸ್ಸಿನಿಂದ ಸ್ಮರಿಸುತ್ತಾರೆ. ಈ ಇಳಿವಯಸ್ಸಿನಲ್ಲೂ ಜಾತ್ರೆ-ಉತ್ಸವಗಳು ಮಾತ್ರವಲ್ಲದೆ ಹತ್ತಿರದ ಊರುಗಳಿಗೆ ಮೊಮ್ಮಕ್ಕಳಾದ ದೇವಮ್ಮ ಹಾಗೂ ಹನಮಂತನ ಸಹಾಯದೊಂದಿಗೆ ಧಾವಿಸುವ ತಿಮ್ಮಜ್ಜ ರಂಗುರಂಗಿನ ಟೋಪಿ ತೊಟ್ಟು ಚಿರಯುವಕನಂತೆ ಕಂಗೊಳಿಸಿದರೂ, ಉತ್ಸಾಹದ ಚಿಲುಮೆಯಂತೆ ಹಾಡಿ ನಲಿದರೂ, ದೃಷ್ಟಿ ಮಂದವಾಗಿ ಕಾಣದ ಒಂದು ಕಣ್ಣಿನ ಬಗೆಗೆ ಬೇಸರ ಪಟ್ಟುಕೊಂಡರೂ ಕಲಾ ಪ್ರದರ್ಶನದ ವಿಷಯದಲ್ಲಿ ಹಳಿ ತಪ್ಪದಂತೆ ಜಾಗೃತಿ ವಹಿಸುತ್ತಾರೆ. ಆಟ ಶುರುವಾದರೆ ಸಾಕು ಆತನ ಜಾಣ್ಮೆ, ನೆನಪು, ಪಳಗಿದ ಕೈಗಳ ಚಲನಶೀಲತೆ ಹೊಸದೊಂದು ಲೋಕ ಸೃಷ್ಟಿಯಾದಂತಾಗಿ ಬೆರಗು ಮೂಡಿಸದಿರದು. ಹೆಚ್ಚು ಓಡಾಡಲು ಸಾಧ್ಯವಾಗದ, ದೃಷ್ಟಿ ಮಂದವಾದರೂ ಕಲೆಯನ್ನು ಉಳಿಸಿಕೊಳ್ಳಲು ಹಾಗೂ ತುತ್ತಿನ ಚೀಲ ತುಂಬಿಸಿಕೊಳ್ಳಲು ಹರಸಾಹಸ ಪಡುವ ತಿಮ್ಮಜ್ಜನಿಗೆ ಪ್ರೋತ್ಸಾಹದ ಅಗತ್ಯತೆ ಖಂಡಿತವಾಗಿಯೂ ಇದೆ. ವ್ಯಕ್ತಿಗಳ, ಸಂಘ-ಸಂಸ್ಥೆಗಳ ಹಾಗೂ ವಿವಿಧ ಇಲಾಖೆ ಮತ್ತು ಸರಕಾರಗಳ ಕಣ್ಣು ತೆರೆಸಬೇಕಿದೆ.

**ಗರ್ದಿಗಮ್ಮತ್ತಿನ ಹಾಡಿನ ಫಲಕುಗಳು:**

ಆಧುನಿಕ ಕಾಲಘಟ್ಟದ ಯಾವ ಸೌಕರ್ಯಗಳಿಲ್ಲದ ಕಾಲಘಟ್ಟದಲ್ಲಿ ಗ್ರಾಮೀಣ ಜನಜೀವನದ ಮನರಂಜನೆಯ ದಿವ್ಯ ಸಾಧನವಾಗಿದ್ದ 'ಬಾಂಬೆ ಡಬ್ಬಾ ಟಾಕೀಸ್'

ಎಂಬ ಪೆಟ್ಟಿಗೆಯು ಮಕ್ಕಳು ಮರಿಗಳು ಮಾತ್ರವಲ್ಲದೆ ಎಲ್ಲರಿಗೂ ವಿಸ್ಮಯದ ಗೂಡಾಗಿತ್ತು. ಊರೂರಿನ ಗಲ್ಲಿಗಲ್ಲಿಗಳಿಗೆ ಹೊತ್ತುಕೊಂಡು ಸಾಗುವ ತಿಮ್ಮಣ್ಣನ ವೇಷಭೂಷಣಕ್ಕೆ, ಗೆಜ್ಜೆಯ ಸದ್ದಿಗೆ, ಬಾರಿಸುವ ಕೈಚಳಕಕ್ಕೆ ಹಾಗೂ ಹಾಡಿನ ಮಾದರಿಗೆ ಇಡೀ ಪರಿಸರದಲ್ಲಿ ಸಂಭ್ರಮ ಮನೆ ಮಾಡುತ್ತಿತ್ತು. ಸುರುಳಿಯಾಕಾರದಲ್ಲಿ ಜೋಡಿಸಿದ್ದ ಚಿತ್ರಗಳಲ್ಲಿನ ಲೋಕದ ಸೋಜಿಗಗಳನ್ನೆಲ್ಲ ಒಂದೆರಡು ನಿಮಿಷಗಳಲ್ಲಿ ಬಿತ್ತರಿಸಿ ಹೊಸದೊಂದು ಲೋಕ ಸೃಷ್ಟಿ ಮಾಡಿಬಿಡುವ ತಿಮ್ಮಣ್ಣನ ಮೋಡಿ ಆಶ್ಚರ್ಯಕರ ಸಂಗತಿ.

ಕೋಟೆನಾಡಿನ ಇಳಕಲ್ಲಿನ ಆಡುಭಾಷಾ ಸೊಗಡನ್ನು ಬಳಸಿಕೊಂಡು ಪ್ರಾಸ-ತಾಳಬದ್ಧವಾಗಿ ತನ್ನದೇ ಲೋಕದಲ್ಲಿ ಹಾಡುತ್ತಿದ್ದರೆ ನೋಡುವವರ ಕಣ್ಣುಗಳಲ್ಲಿ ವಿಸ್ಮಯದ ಲೋಕವಿದ್ದರೆ, ಸುತ್ತಲೂ ನಿಂತುಕೊಂಡು ಕೇಳುವವರ ಮನದ ಮೂಲೆಯಲ್ಲಿ ಕೆಲವೇ ಸೆಕೆಂಡುಗಳಲ್ಲಿ ಕಲ್ಪನೆಯ ಜಗತ್ತು ಸೃಷ್ಟಿಯಾಗಿಬಿಡುತ್ತದೆ. ಪ್ರತೀ ಸಾಲಿನಲ್ಲಿ ತಪ್ಪದೇ ಕಾಣಿಸಿಕೊಳ್ಳುವ 'ನೋಡು' ಎನ್ನುವ ಪದ ಮೊಣಕಾಲೂರಿ ಒಂಟಿಕಣ್ಣಲ್ಲಿ ನೋಡುವವರ ಮನದಲ್ಲಿ ಅದೆಂಥದೋ ಹುರಿದುಂಬಿಸುವಿಕೆಯ ಮಹಾಶಕ್ತಿಯನ್ನು ತುಂಬಿಬಿಡುತ್ತದೆ.

**ಕಿತ್ತೂರ ಚೆನ್ನಮ್ಮ ಬಂದಾಳ ನೋಡು**
**ಕುದುರಿ ಮ್ಯಾಲ ಕುಂತಾಳ ನೋಡು**
**ಕೂಸಿನ ಬೆನ್ನಾಗ ಕಟ್ಯಾಳ ನೋಡು**
**ಕೈಯಲ್ಲಿ ಕತ್ತಿ ಹಿಡದಾಳ ನೋಡು.**

**ಕ್ರಾಂತಿವೀರ ಪಿಚ್ಚರ್ ನೋಡು**
**ಸಂಗೊಳ್ಳಿರಾಯ ಹೊಂಟಾನ ನೋಡು**
**ಯುದ್ಧ-ಲಡಾಯಿ ಮುಗಸ್ಯಾನ ನೋಡು**
**ಲಾಸ್ಟ್ ಜೀವಾ ಕೊಟ್ಟಾನ ನೋಡು**
**ಸೈನಿಕರ ಜೀವಾ ತಗದಾನ ನೋಡು**

**ಸಿಂಧೂರ ಲಕ್ಷ್ಮಣ ಹೊಂಟಾನ ನೋಡು**
**ಬಿಲ್ಲು ಬಾಣ ಹಿಡದಾನ ನೋಡು**

ಹರಿಯುವ ನೀರಿನ ಜುಳುಜುಳು ನಿನಾದದಂತೆ ತಿಮ್ಮಣ್ಣನ ಬಾಯಿಂದ ಯಾವ ಅವಸರದ ಕುದುರೆಯನ್ನೇರದೆ ಬಿತ್ತರವಾಗುತ್ತಿದ್ದ ಈ ಮೇಲಿನ ಹಾಡುಗಳೆಲ್ಲ ಚಿತ್ರಸಹಿತವಾಗಿ ಒಂದು ಸನ್ನಿವೇಶವನ್ನು ಕಟ್ಟಿಕೊಡುತ್ತವೆ. ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರ ವಿರುದ್ಧ ಹೋರಾಡಿದ ಕೆಚ್ಚೆದೆಯ ಕಲಿಗಳ ಶೌರ್ಯ-ತ್ಯಾಗ-ಬಲಿದಾನಗಳನ್ನು ಕಣ್ಮುಂದೆ ಬಿಚ್ಚಿಟ್ಟು ಎಳೆಯ ಬಾಲಕರಲ್ಲಿ ದೇಶಭಕ್ತಿಯ ಪಾಠವನ್ನೇಳಿ ಮನ ತುಂಬಿಸಿಬಿಡುತ್ತವೆ.

**ಮೌಲಾಲಿ ದರ್ಗಾ ನೋಡು**
**ಯಮನೂರ ದಾದಾ ನಿಂತಾನ ನೋಡು**
**ದಾದಾ ಪೀರಾ ಬಂದಾನ ನೋಡು**
**ಹುಲಿ ಮ್ಯಾಲೆ ಕುಂತಾನ ನೋಡು**

**ಗುಲಬರ್ಗಾ ದರಗಾ ನೋಡು**
**ಬಂದೇನವಾಜ ದರಗಾ ನೋಡು**
**ಬಿಜಾಪೂರದ ದರಗಾ ನೋಡು**
**ಗೋಳಗುಮ್ಮಟ ದರಗಾ ನೋಡು**

**ಶ್ರೀಶೈಲಕ ಹೊಂಟಾರ ನೋಡು**
**ಮಲ್ಲಯ್ಯನ ಜಾತ್ರಿ ನೋಡು**

ತಲೆಯ ಮೇಲಿನ ಟೊಪ್ಪಿಗೆಗೆ ಕಟ್ಟಿದ ಬಣ್ಣಬಣ್ಣದ ಚೆಂಡನ್ನು ತಿರುಗಿಸುತ್ತಾ ತನ್ಮಯನಾಗಿ ಹಾಡುತ್ತಿದ್ದರೆ ನಾಡಿನ ಧಾರ್ಮಿಕ ಚಿತ್ರಗಳು ಮಾತ್ರವಲ್ಲದೆ ಅವುಗಳ ಹಿಂದಿನ ಇತಿಹಾಸ, ಹೋರಾಟ, ಶಕ್ತಿ-ಭಕ್ತಿಗಳೆಲ್ಲ ಮಾರ್ದನಿಸುತ್ತವೆ. ಆ ಮೂಲಕ ಆಧ್ಯಾತ್ಮದ ರಾಯಭಾರಿಯಂತೆ, ಭಾವೈಕ್ಯದ ಸಂತನಂತೆ ತಿಮ್ಮಜ್ಜ ಕಾಣಿಸಿಬಿಡುತ್ತಾನೆ.

**ಹಂಪಿ ಒಳಗಿನ ಕಟ್ಟಿ ನೋಡು**
**ವಿರೂಪಾಕ್ಷಿ ಜಾತ್ರಿ ನೋಡು**
**ಜಾತ್ರೀಗಿ ನಡದಾರ ನೋಡು**
**ಪಂಪಾಪತಿ ದೇವರ ನೋಡು**
**ತುಂಗಭದ್ರಾ ಹೊಳಿಯ ನೋಡು**

**ಪಾಕಿಸ್ತಾನದ ಮಂದಿ ನೋಡು**
**ಹಿಂದೂಸ್ತಾನದ ಅಂದ ನೋಡು**
**ಇಳಕಲ್ಲ ಊರ ನೋಡು**
**ಮಹಾಂತಪ್ಪನ ಜಾತ್ರಿ ನೋಡು**

**ಮಕ್ಕಾ ಮದೀನಾ ದರಗಾ ನೋಡು**
**ಅರಬಸ್ತಾನದ ಕುದುರಿ ನೋಡು**

ಒಂದಕ್ಕೊಂದು ಸಂಬಂಧವಿರದಿದ್ದ ಅನೇಕ ಸಂಗತಿಗಳು ನೋಡುವ ಸಂದರ್ಭದಲ್ಲಿ ಗೊಂದಲ ಮೂಡಿಸುತ್ತಿದ್ದರೂ ಅವುಗಳ ಸಹಸಂಬಂಧವನ್ನು, ಒಳಗಡೆ ಓಡುವ ಚಿತ್ರಗಳೊಂದಿಗೆ ಸಮೀಕರಿಸುವ ಆತನ ಜಾಣ್ಮೆಯನ್ನು ನೋಡಿ, ಕೇಳಿ ತಲೆದೂಗಲೇಬೇಕು. ದೇಶ-ಕಾಲದ ಸಂಗತಿಗಳನ್ನು ಮೀರಿ ಮೇಳವಿಸುವ ಸಂಗತಿಗಳು ಇಡೀ ಜಗತ್ತನ್ನು ಒಂದೇ ಸರಳರೇಖೆಯಲ್ಲಿ ತಂದಿಡುವ ಗರ್ದಿಗಮ್ಮತ್ತಿನ ಪರಿಯನ್ನು ಮೆಚ್ಚಲೇಬೇಕು.

ಬಳ್ಳಾರಿ ಜಿಲ್ಲಾ ನೋಡು
ಗುಂತಕಲ್ಲ ರೈಲು ನೋಡು
ರೈಲು ಗಾಡಿ ಹೊಂಟೈತಿ ನೋಡು
ಕಬ್ಬಿಣದ ನಾಡು ನೋಡು

ಕನ್ನಂಬಾಡಿ ಕಟ್ಟಿ ನೋಡು
ಕಟ್ಟಿಯೊಳಗಿನ ಮಂದಿ ನೋಡು

ಅಂಕೋಲ ಹೋಳಿ ನೋಡು
ನೀರ ಒಳಗ ಹಡಗ ನೋಡು
ಮೀನದ ಬಲಿ ಹಾಕ್ಯಾರ ನೋಡು
ಮಿಶನ್ ಹಡಗ ಹೊಂಟದ ನೋಡು

ರೊಟ್ಟಿ ಮಲ್ಲವ್ವ ಬಂದಾಳ ನೋಡು
ತಲಿಮ್ಯಾಲ ಬುತ್ತಿ ಹೊತ್ತಾಳ ನೋಡು

ಬಲಗೈಯಿಂದ ತಾಳ ಹಾಕುತ್ತಾ, ಎಡಗೈಯಿಂದ ಗೆಜ್ಜೆ ಕುಣಿಸುತ್ತಾ ಕಟ್ಟಿಕೊಡುವ ಮೇಲಿನ ಮಾದರಿಯ ಹಾಡುಗಳು ಲೋಕದ ವೈವಿಧ್ಯತೆಯನ್ನು ಚಿತ್ರಮಾದರಿಯಂತೆ ಕಟ್ಟಿಕೊಟ್ಟು ಮಕ್ಕಳ ಮನೋಲೋಕದಲ್ಲಿ ಅಚ್ಚಳಿಯದೆ ಉಳಿದುಬಿಡುತ್ತವೆ. ಶಿಕ್ಷಣದ ಒಂದು ಭಾಗವಾಗಿ ತಿಮ್ಮಣ್ಣನ ಹಾಡುಗಳು ಹಾಗೂ ಗರ್ದಿಗಮ್ಮತ್ತಿನ ಕಲೆ ಕೆಲಸ ಮಾಡುತ್ತಿರುವುದಂತೂ ಸುಳ್ಳಲ್ಲ. ಆ ಮೂಲಕ ನಮ್ಮ ಕಲಾಪರಂಪರೆಗಳೆಡೆಗಿನ ಗೌರವವನ್ನು ಇಮ್ಮಡಿಯಾಗಿಸುತ್ತವೆ.

ರಾಮಾಚಾರಿ ಪಿಚ್ಚರ್ ನೋಡು
ರವಿಚಂದ್ರ ಹೊಂಟಾನ ನೋಡು

ಶಬ್ಧವೇದಿ ಸಿನೆಮಾ ನೋಡು
ರಾಜಕುಮಾರ ಹೊಂಟಾನ ನೋಡು
ಬೆಂಗಳೂರ ಶಹರ ನೋಡು
ವಿಧಾನಸಭಾ ನೋಡು

ಗೋರೆ ಗೋರೆ ಮುಖಡೆಕ
ಕಾಲೆ ಕಾಲೆ ಚಸ್ಮುಮಾ

ಸಿನೆಮಾ ಎಲ್ಲ ಕಾಲಕ್ಕೂ ಎಲ್ಲಾ ವಯೋಮಾನವನ್ನು ಸೆಳೆಯುವ ಮಾಧ್ಯಮವಾಗಿದ್ದು ಆಯಾ ಕಾಲಘಟ್ಟದ ಪ್ರಮುಖ ನಟ-ನಟಿಯರ, ಹಾಡು-ಪಾಡುಗಳ ಪಾತ್ರ-ಚಿತ್ರಣಗಳೊಂದಿಗೆ ಗುನುಗುವ ಹಾಡುಗಳೇ ತಿಮ್ಮಣ್ಣನನ್ನು ಹಾಗೂ ಗರ್ದಿಗಮ್ಮತ್ತನ್ನು ಜನಪ್ರಿಯಗೊಳಿಸಿವೆ.

**ಪಾಪ ಮಾಡಿದ ಮಂದಿ ನೋಡು**
**ಕರಗಸೀಲೆ ಕೊಯ್ದಾರ ನೋಡು**
**ಗಾಣಗಾಕಿ ತಿರವ್ಯಾರ ನೋಡು**
**ಮುಳ್ಳಗಗ್ಗರಿಗಿ ಹಾಕ್ಯಾರ ನೋಡು**
**ಕತ್ತಿ ಕಠಾರಿ ಹಿಡದಾರ ನೋಡು**

**ಬಾರಕೋಲು ಭರಮಣ್ಣ ಹೊಂಟಾನ ನೋಡು**
**ಕೈಯಲ್ಲಿ ಬಾರಕೋಲು ಹಿಡಿದಾನ ನೋಡು**

ಗರ್ದಿಗಮ್ಮತ್ತು ಕೇವಲ ಮನರಂಜನೆಯ ಉದ್ದೇಶವನ್ನಷ್ಟೇ ಅಲ್ಲದೆ ನೈತಿಕತೆಯ ಪಾಠವನ್ನು ಹಾಡಿನ ಮೂಲಕ ಹೇಳುವುದಲ್ಲದೆ ಎಚ್ಚರಿಕೆಯ ಪಾಠವನ್ನು ಸಾರಿ ಸಾರಿ ಹೇಳುತ್ತದೆ. ಆ ಮೂಲಕ ಸಮಾಜವನ್ನು ನಿಯಂತ್ರಿಸುವ ರಕ್ಷಾಕವಚಗಳಂತೆ ಭಾಸವಾಗುತ್ತವೆ.

**ವಡ್ಡರ ನಾಗವ್ವ ಬಂದಾಳ ನೋಡು**
**ಬೆಟ್ಟದ ಮ್ಯಾಲ ಬಿದ್ದಾಳ ನೋಡು**
**ಕುಂಡಿಗಿ ಚಡ್ಡಿ ಹಾಕ್ಯಾಳ ನೋಡು**

**ಬಿಸೇ ಮುದ್ದಿ ಉಂಡು**
**ಹಸೇ ಕಲ್ಲ ವಡದಾಳ ವಡ್ಡರ ನಾಗವ್ವ**

ಇಂತಹ ನೂರಾರು-ಸಾವಿರಾರು ಹಾಡುಗಳನ್ನು ನಾಲಿಗೆಯ ತುದಿಯ ಮೇಲಿಟ್ಟುಕೊಂಡು ಬದುಕುತ್ತಿರುವ ತಿಮ್ಮಣ್ಣ ರಾಮವಾಡಗಿಯು ಕೇವಲ ಇಳಕಲ್ಲಿನ ನೆಲದ ಕೊನೆಯ ಕೊಂಡಿಯಷ್ಟೇ ಅಲ್ಲ. ಈ ನೆಲದ, ಪರಂಪರೆಯ ಕೊನೆಯ ಕೊಂಡಿಯೆಂಬುದೂ ಕಟುಸತ್ಯದ ಮಾತು. ಈತನೊಂದಿಗೆ ಈ ಕಲೆಯನ್ನು ಕರಗತ ಮಾಡಿಕೊಂಡಿದ್ದ ರಾಮಣ್ಣನೆಂಬುವನು ಅರ್ಧದಾರಿಯಲ್ಲಿ ಕೈಬಿಟ್ಟು ಬೇರೆ ಉದ್ಯೋಗಕ್ಕೆ ಅಂಟಿಕೊಂಡಾಗಿದೆ. ಗರ್ದಿಗಮ್ಮತ್ತನ್ನೇ ಉಸಿರಾಡುತ್ತಿದ್ದ ರೋಣ ತಾಲ್ಲೂಕಿನ ಸಂಕಪ್ಪಜ್ಜನೂ ಇತ್ತೀಚೆಗೆ ಇಹಲೋಕ ಯಾತ್ರೆ ಮುಗಿಸಿದ್ದಾನೆ. ಈಗ ಉಳಿದಿರುವ ಈ ಭಾಗದ ಏಕೈಕ ಜೀವವಾಗಿ ಈ ಕಲೆಯ ಉಸಿರಾಗಿರುವ ಈತ ಬೆಲೆ ಕಟ್ಟಲಾಗದ ಕಲಾವಿದ. ಮೊಮ್ಮಗ ಹನಮಂತ ಅಷ್ಟಿಷ್ಟು ಕಲಿತುಕೊಂಡಿದ್ದರೂ ದುಬಾರಿ ದುನಿಯಾದ ಇಂದಿನ ಬದುಕು ಆತನನ್ನು ಕೊನೆಯವರೆಗೆ ಕೈಹಿಡಿಯುತ್ತದೆ ಎಂಬುದೂ ಅನುಮಾನದ ಸಂಗತಿ.

ಜಾನಪದ ಜಗತ್ತಿನ ಅಮೂಲ್ಯ ಕಲಾನಿಧಿಗಳಲ್ಲೊಂದಾದ ಗರ್ದಿಗಮ್ಮತ್ತನ್ನು ಈ ಇಳಿಸಂಜೆಯಲ್ಲೂ ಉಸಿರಾಡುತ್ತ ಅದರ ಸವಿಯನ್ನು ಉಣಬಡಿಸುತ್ತಲೇ ಬದುಕನ್ನು ದೂಡುತ್ತಿರುವ ತಿಮ್ಮಜ್ಜ ಈ ಪರಂಪರೆಯ ದೊಡ್ಡ ಆಸ್ತಿ. ಕೆಲವೇ ನಿಮಿಷಗಳಲ್ಲಿ ಲೋಕದ ಸಂಗತಿಗಳನ್ನು ಸಚಿತ್ರ ಮಾದರಿಯಲ್ಲಿ ತಂದು ಹೊಸದೊಂದು

ಲೋಕವನ್ನೇ ಸೃಷ್ಟಿಸಿಬಿಡುವ, ಮನರಂಜನೆಯ ನೆಪದಲ್ಲಿ ಮಕ್ಕಳ ಮನೋಲೋಕವನ್ನು, ಜ್ಞಾನದ ದಿಗಂತವನ್ನು ವಿಸ್ತರಿಸಿಬಿಡುವ ತಿಮ್ಮಣ್ಣ ಮಕ್ಕಳ ಪಾಲಿನ 'ಕಿಂದರಜೋಗಿ'ಯೇ ಸರಿ. ವಿಶೇಷವೆಂದರೆ ಇಂದು ಗರ್ದಿಗಮ್ಮತ್ತು ಮಕ್ಕಳಿಗಷ್ಟೆ ಆಕರ್ಷಣೆಯ ವಸ್ತು–ವಿಷಯವಾಗದೆ ಎಲ್ಲ ವಯೋಮಾನವನ್ನು ಮೀರಿ ಗಮನ ಸೆಳೆಯುತ್ತಿದೆ. ಮುಖ್ಯವಾಗಿ ಇಂದಿನ ವಯಸ್ಕ–ಹಿರಿಯರಿಗೆ ತಮ್ಮ ಬಾಲ್ಯದ ಅಮೂಲ್ಯ ನೆನಪುಗಳನ್ನು ಹಸಿಹಸಿಯಾಗಿ ಬಿಚ್ಚಿಟ್ಟು ಭಾವುಕರನ್ನಾಗಿಸುತ್ತದೆ. ವಯಸ್ಸು, ಅಂತಸ್ತುಗಳನ್ನು ದಾಟಿ ಎಲ್ಲರನ್ನು ಗ್ರಾಹಕರನ್ನಾಗಿಸುವಲ್ಲಿ ಸಫಲವಾಗುತ್ತಿದೆ ಎಂದರೂ ಇಂದಿನ ಡಿಜಿಟಲ್ ಯುಗದಲ್ಲಿ ಸಪ್ಪೆ ಎಂದೆನಿಸದಿರದು. ಮೊಬೈಲ್ ಪ್ರಪಂಚದಲ್ಲಿ ಮುಳುಗಿರುವ ಇಂದಿನ ಮಕ್ಕಳನ್ನು ಆಕರ್ಷಿಸುವಲ್ಲಂತೂ ಗರ್ದಿಗಮ್ಮತ್ತಿನ ಈ ಪೆಟ್ಟಿಗೆ ಸಂಪೂರ್ಣ ಸೋತು ನೇಪಥ್ಯಕ್ಕೆ ಸರಿದುಬಿಟ್ಟಿದೆ ಎಂಬುದೂ ಅಷ್ಟೇ ಸತ್ಯ.

ವೃದ್ಧಾಪ್ಯ, ಮಸುಕು ಮಸಕಾದ ದೃಷ್ಟಿ ಹಾಗೂ ಕಾಯಿಲೆಗಳ ಗೂಡಾದ ದೇಹದಲ್ಲೂ ಗರ್ದಿಗಮ್ಮತ್ತಿನ ಚಿಲುಮೆ ಇಂದಿಗೂ ತಿಮ್ಮಜ್ಜನನ್ನು ಉತ್ಸಾಹದ ಕಡಲಲ್ಲಿ ತೇಲಿಸುತ್ತದೆ. ಕಲೆಗಾಗಿ ಬದುಕಿದ ಜೀವ ಇಂದಿಗೂ ಭಾರವಾದ ಡಬ್ಬಿಯನ್ನು ಹೊತ್ತುಕೊಂಡು ಅದರ ಸವಿರುಚಿಯನ್ನು ತಲುಪಿಸಲು, ನೆನಪುಗಳ ಬುತ್ತಿಯನ್ನು ಬಿಚ್ಚಿಡಲು ಹಾಗೂ ಈ ಕಲೆಯನ್ನು ಉಳಿಸಲೆಂದು ಹಗಲಿರುಳೆನ್ನದೆ ಊರೂರು ಅಲೆಯುತ್ತಿದೆ. ಮುಖ್ಯವಾಗಿ ತುತ್ತಿನ ಚೀಲ ತುಂಬಿಸಿಕೊಳ್ಳಲು, ಬದುಕಿನ ಬಂಡಿ ನೂಕಲು, ಔಷಧೋಪಚಾರದ ಅಗತ್ಯತೆಗಾಗಿ ಗರ್ದಿಯ ಗಮ್ಮತ್ತಿನಲ್ಲಿಯೇ ಘರ್ಜಿಸುತ್ತಿದೆ. ಸಂಘ–ಸಂಸ್ಥೆಗಳ, ಸರಕಾರದ ಸಹಾಯಹಸ್ತಕ್ಕಾಗಿ ಈ ಹಿರಿಯ ಜೀವ ಕಣ್ತೆರೆದುಕೊಂಡು ಕಾದು ಕುಳಿತಿದೆ. ಈ ಕಲೆಯ, ಪರಂಪರೆಯ ಕೊನೆಯ ಕೊಂಡಿಯಾಗಿರುವ ತಿಮ್ಮಣ್ಣ ರಾಮವಾಡಗಿಯವರು ಇಂದಿಗೂ ಎಲೆಮರೆಯ ಕಾಯಿಯಾಗಿ, ಅಜ್ಞಾತರಾಗಿಯೇ ಉಳಿದುಬಿಟ್ಟಿದ್ದಾರೆ. ಇವರನ್ನು ಗುರುತಿಸಿ ಪ್ರೋತ್ಸಾಹಿಸುವ ಅಗತ್ಯವಿದ್ದು ವ್ಯಕ್ತಿಗತವಾಗಿ ಮಾತ್ರವಲ್ಲದೆ ಸಮಾಜ, ಸರಕಾರಗಳು ಇಂತಹ ಕಲಾವಿದರೆಡೆಗೆ ಗಮನ ಹರಿಸುವ ಅಗತ್ಯವೂ ಅನಿವಾರ್ಯವೂ ಮುಖ್ಯವಾಗಬೇಕಿದೆ. ಅಜ್ಞಾತವಾಗಿ ನೇಪಥ್ಯಕ್ಕೆ ಸರಿಯುತ್ತಿರುವ ಇಂತಹ ಕಲೆ–ಕಲಾವಿದರನ್ನು ಬೆಂಬಲಿಸಿ, ಪ್ರೋತ್ಸಾಹಿಸಿ, ಬೆನ್ನುತಟ್ಟುವ ತುರ್ತಿನೆಡೆಗೆ ಕಣ್ಣು ತೆರೆಯಬೇಕಿದೆ. ಅಂದಾಗ ಮಾತ್ರ ಇಂತಹ ಕಲಾವಿದರೂ ಉಳಿದಾರು! ಕಲೆಯೂ ಉಳಿದೀತು!

## ಪರಾಮರ್ಶನ ಗ್ರಂಥಗಳು:

1. ತಿಮ್ಮಣ್ಣ ರಾಮವಾಡಗಿಯವರೊಂದಿಗಿನ ಮಾತುಕತೆ
2. ಗರ್ದಿಗಮ್ಮತ್ತು ಕಲಾ ವೀಕ್ಷಣಾ ಅನುಭವಗಳು

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.